**ಕಲಘಟಗಿ ತಾಲ್ಲೂಕಿನಲ್ಲಿ ಹೊಸ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವುದು**

2350 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. *ಕಲಘಟಗಿ ತಾಲ್ಲೂಕಿನ ಸೂರಶೆಟ್ಟಿ ಕೊಪ್ಪ, ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮಗಳಲ್ಲಿ ಪಶುವೈದ್ಯ ಶಾಲೆಗಳು ಇವೆಯೇ?*

ಆ. *ಇಲ್ಲದಿದ್ದಲ್ಲಿ ಈ ಗ್ರಾಮಗಳಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವ ವಿಚಾರ ಸರ್ಕಾರದ ಮುಂದಿದೆಯೇ?*

ಇ. *ಇಲ್ಲದಿದ್ದರೆ ಕಾರಣಗಳೇನು?*

ಶ್ರೀ ಬಸವರಾಜ ಪಾಟೀಲ್(ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):

ಅ. ಇಲ್ಲ.

ಆ. ಇದೆ.

ಇ. ಜಿಲ್ಲಾಪರಿಷತ್‌ನ ಪ್ರಸ್ತಾವನೆ ಬಂದಾಗ ಪರಿಶೀಲಿಸಲಾಗುವುದು.

**ದಕ್ಷಿಣ ಕನ್ನಡದಲ್ಲಿ ಅತಿವೃಷ್ಟಿಯಿಂದಾದ ಹಾನಿ ಕುರಿತು.**

2319 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಭಾರೀ ಮಳೆಯಿಂದ ನೆರೆ ಬಂದು ಹಾನಿಯಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?ಈ ನೆರೆ ಹಾವಳಿಯಿಂದ ಆದ ಹಾನಿ ಎಷ್ಟು?*

ಆ. *ಅತಿ ಮಳೆಯಿಂದ, ನೆರೆಯಿಂದ ಕಂಗೆಟ್ಟವರಿಗೆ ಸರ್ಕಾರ ಕೈಗೊಂಡ ಪರಿಹಾರ ಕಾರ್ಯಕ್ರಮಗಳೇನು?*

ಇ. *ಇದಕ್ಕಾಗಿ ವಿಚ್ರ್ಚು ಮಾಡಲಾದ ಹಣವೆಷ್ಟು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು) :

ಅ. ಬಂದಿದೆ.

ಆ. 411.70 ಲಕ್ಷ ರೂಪಾಯಿಗಳು.

1. ಮಡಿದವರ ಅರ್ಹ ಕುಟುಂಬದವರಿಗೆ ಸಹಾನುಭೂತಿ ಪರಿಹಾರ.

2. ಬಡ ಕುಟುಂಬಗಳ ಮನೆ ಹಾನಿ ದುರಸ್ತಿ ಪರಿಹಾರ.

3. ಜಾನುವಾರು ಹಾನಿ ಪರಿಹಾರ.

4. ಉಚಿತ ಕೃಷಿ ಚೀಲ ವಿತರಣೆ.

5. ಸಣ್ಣ ಮತ್ತು ಅತೀ ಸಣ್ಣ ರೈತರ ಹಾನಿಗೀಡಾದ ಕೃಷಿ ಜಮೀನು ಅಭಿವೃದ್ಧಿ ಪರಿಹಾರ.

6. ಫಿಷ್ ಫಾರಂ ದುರಸ್ತಿ.

ಇ. 8.48 ಲಕ್ಷ ರೂಪಾಯಿಗಳು.

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯ ಒತ್ತುವರಿ**

2314 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?